

ಯುಗ' ಆರಂಭವಾದ ನಂತರವೂ ಅನೇಕರು ಮಂಗಳ ಗ್ರಹದ ಮೇಲೆ ಜೀವಿಗಳಿರುವ ಸಾಧ್ಯತೆಯ ಬಗ್ಗೆ ನಂಬಿಕೆಯಿಟ್ಟುಕೊಂಡಿದ್ದರು.

1965ರಲ್ಲಿ ಅಮೆರಿಕದ 'ಮ್ಯಾರಿನರ್ 4' ನೌಕೆ ಮಂಗಳ ಗ್ರಹದ ಸಮೀಪದಲ್ಲಿ ಹಾದುಹೋದ ವೇಳೆಯಲ್ಲಿ ಅದು ತೆಗೆದ ಚಿತ್ರಗಳು ರೇಡಿಯೋ ತರಂಗಗಳ ರೂಪದಲ್ಲಿ ಭೂಮಿಯನ್ನು ತಲುಪಿದವು. ಆದರೆ, ಅವನ್ನು ಕಂಡ ಅನೇಕರಿಗೆ ಭಾರೀ ನಿರಾಸೆಯಾಯಿತು. ಏಕೆಂದರೆ ಅವುಗಳಲ್ಲಿ ಕೇವಲ ಮಂಗಳ ಗ್ರಹದ ಮೇಲಿನ ಹೊಂಡಗಳು ಕಂಡುಬಂದವೇ ಹೊರತು, ಬುದ್ಧಿಜೀವಿಗಳಿಂದ ನಿರ್ಮಿತವಾದ ಬೃಹತ್ ಕಾಲುವೆಗಳಲ್ಲ!

ಆ ಬಳಿಕ ಮಂಗಳ ಗ್ರಹದ ಮೇಲಿಳಿದ ಸೋವಿಯತ್ ರಷ್ಯಾದ ನೌಕೆಯ ಕೋಶವೊಂದು ಕೇವಲ ಹದಿನೈದು ಸೆಕೆಂಡುಗಳ ಕಾಲ ಮಾತ್ರ 'ಮಾತನಾಡಿ' ನಂತರ ಹಟಾತ್ತನೆ ಸ್ತಬ್ಧವಾದಾಗ ಅಲ್ಲಿನ 'ಬುದ್ಧಿಜೀವಿಗಳು' ಆ ಕೋಶವನ್ನು ನಿಷ್ಕ್ರಿಯಗೊಳಿಸಿರುವ ಬಗ್ಗೆ ಊಹಾಪೋಹ ಉಂಟಾಯಿತು!

## ಮಂಗಳನ ನಿಜಸ್ವರೂಪ

ಅದಾದ ಕೆಲ ಕಾಲದ ನಂತರ ಅಮೆರಿಕದ 'ಮ್ಯಾರಿನರ್ 9' ನೌಕೆ ಮಂಗಳಗ್ರಹವನ್ನು ಸುತ್ತುಹಾಕಲಾರಂಭಿಸಿತು. ಅದು ಕಳುಹಿಸಿದ ಮಂಗಳ ಗ್ರಹದ ಮೇಲ್ಮೈ ದೃಶ್ಯ ಅದ್ಭುತವಾದುದಾಗಿತ್ತು. ಮೌಂಟ್ ಎವರೆಸ್ಟ್‌ಗಿಂತ ಮೂರುಪಟ್ಟು ದೊಡ್ಡದಾದ ಒಂದು ಪರ್ವತ ಅದರ ಕ್ಯಾಮೆರಾ ಕಣ್ಣಿಗೆ ಕಾಣಿಸಿತ್ತು! ಅಂತೆಯೇ, ಆ ಗ್ರಹದ ಮೇಲಿನ 4000 ಕಿಲೋಮೀಟರ್ ಉದ್ದವಿರುವ ಬೃಹತ್ ಕಮರಿಯ (ಕ್ಯಾನ್ಯನ್) ಮುಂದೆ ಭೂಮಿಯ ಮೇಲಿನ ಗ್ರ್ಯಾಂಡ್ ಕ್ಯಾನ್ಯನ್ ಕಮರಿ ಕುಬ್ಜವೆನಿಸಿತು.

ಇದಕ್ಕಿಂತ ಹೆಚ್ಚಾಗಿ ನದಿಯೊಂದರ ಮುಖಜಭೂಮಿಯಲ್ಲಿ ಆ ನದಿಯು ಸೀಳುಗಳಾಗಿ ಸಮುದ್ರಕ್ಕೆ ಸೇರುವಾಗ ಕಾಣಬರುವಂತಹ ದೃಶ್ಯ ಮಂಗಳ ಗ್ರಹದ ಮೇಲೆ ಕಂಡುಬಂದಾಗ ವಿಜ್ಞಾನಿಗಳು ಜಾಗೃತರಾದರು.

ಮಂಗಳನ ಮೇಲಿನ ಸ್ವರೂಪಗಳ ಅಸ್ತಿತ್ವಕ್ಕೆ ಮಂಗಳಗ್ರಹದ ಮೇಲೆ ಒಂದು ಕಾಲದಲ್ಲಿ ವಿಪುಲವಾಗಿ ನೀರು ಹರಿದದ್ದು ಕಾರಣವೇ? ಹಾಗಾದರೆ ಆ ನೀರೆಲ್ಲಾ ಎಲ್ಲಿ, ಹೇಗೆ ಹೋಯಿತು? ನೀರಿದ್ದರಿಂದ ಮಂಗಳ ಗ್ರಹದ ಮೇಲೂ ಜೀವ ಉತ್ಪತ್ತಿಯಾಗಿತ್ತೇ? ಈ ಪ್ರಶ್ನೆಗಳು ವಿಜ್ಞಾನಿಗಳ ಮನದಲ್ಲಿ ಸಹಜವಾಗಿಯೇ ಮೂಡಿದವು. ಈ ನಿಟ್ಟಿನಲ್ಲಿ ಹೆಚ್ಚಿನ ಮಾಹಿತಿ ಒದಗಿಸುವ ಸಲುವಾಗಿ ಮಂಗಳ ಗ್ರಹದ ಮೇಲೆ ಎರಡು ವೈಕಿಂಗ್ ನೌಕೆಯ ಕೋಶಗಳನ್ನು 1976ರಲ್ಲಿ ಅಮೆರಿಕ ಇಳಿಸಿತು.

ಮಂಗಳ ಗ್ರಹದ ಮೇಲೆ ಒಂದು ಪುಟ್ಟ ಗಿಡ, ಇಲ್ಲವೇ ಜಿರಳೆಯಂತಹ ಪುಟ್ಟ ಜೀವಿಯೂ ವೈಕಿಂಗ್ ನೌಕೆಯ ಕೋಶಗಳ ಕಣ್ಣಿಗೆ ಕಾಣಲಿಲ್ಲ. ನಂತರ ವೈಕಿಂಗ್ ಕೋಶಗಳು ಆ ಗ್ರಹದ ಮೇಲಿರಬಹುದಾದ ಸೂಕ್ಷ್ಮಜೀವಿಗಳನ್ನು ಗುರುತಿಸುವ ಸಲುವಾಗಿ, ಮಂಗಳನ ಮಣ್ಣನ್ನು ಅಗೆದು ತೆಗೆದು, ತಮ್ಮಲ್ಲಿದ್ದ ಒಂದು ಅತ್ಯಾಧುನಿಕ ಪ್ರಯೋಗಶಾಲೆಯಲ್ಲಿ ವಿಶ್ಲೇಷಿಸಿದವು. ಆದರೆ ಆ ಬಗ್ಗೆ ಖಚಿತವಾದ ಮಾಹಿತಿ ದೊರೆಯಲಿಲ್ಲ. ಆ ಬಗೆಯ ವಿಶ್ಲೇಷಣೆಯಲ್ಲಿ ಸೂಕ್ಷ್ಮಜೀವಿಗಳನ್ನು ಖಚಿತವಾಗಿ ಗುರುತಿಸಲು ಸಾಧ್ಯವಿರಲಿಲ್ಲ ಎಂಬುದು ಇಂದಿನ ಕೆಲವು ವಿಜ್ಞಾನಿಗಳ ಅಭಿಮತವಾಗಿದೆ.

## ಮತ್ತೆ ಕೋಲಾಹಲ

ಸೂಕ್ಷ್ಮಜೀವಿಗಳನ್ನು ಗುರುತಿಸುವ ವೈಕಿಂಗ್ ನೌಕೆಗಳ ಪ್ರಯತ್ನ ನಡೆದ ಎರಡು ದಶಕಗಳ ನಂತರ ಮಂಗಳನಲ್ಲಿ ಬಹು ಹಿಂದೆ ಜೀವ ಉತ್ಪತ್ತಿಯಾಗಿರುವ ಸಾಧ್ಯತೆಯ ಬಗ್ಗೆ ಜಗತ್ತಿನಾದ್ಯಂತ ದೊಡ್ಡ ಕೋಲಾಹಲ ಉಂಟಾಯಿತು. ಆ ಗ್ರಹದ ಒಂದು ಪುಟ್ಟ ತುಂಡೆಂದು ಖಚಿತವಾಗಿ ಹೇಳಲಾದ ಹಾಗೂ ಅಂಟಾರ್ಕ್ಟಿಕಾದಲ್ಲಿ ದೊರಕಿದ ಉಲ್ಕಾಶಿಲೆಯೊಂದರಲ್ಲಿ (ಮೀಟಿಯೊರೈಟ್) ಇಲ್ಲಿನ ಸೂಕ್ಷ್ಮಾತಿಸೂಕ್ಷ್ಮ ಜೀವಿಯೊಂದನ್ನು ಹೋಲುವಂತಹ ಸ್ವರೂಪಗಳು ಹಾಗೂ ಇತರ ಕುರುಹುಗಳು ಕಂಡವೆಂದು ಅಮೆರಿಕದ ನಾಸಾ ವಿಜ್ಞಾನಿಗಳ ಒಂದು ಗುಂಪು ಘೋಷಿಸಿದ್ದೇ ಇದಕ್ಕೆ ಕಾರಣ. ಆದರೆ ಅಂದು ಆ ವಿಜ್ಞಾನಿಗಳಿಗೆ ಕಂಡದ್ದು ಮಂಗಳ ಗ್ರಹದ ಮೇಲಿನ ಸೂಕ್ಷ್ಮಾತಿಸೂಕ್ಷ್ಮ ಜೀವಿಗಳ ಪಳಿಯುಳಿಕೆ ಅಲ್ಲ ಎಂಬುದಾಗಿ ಇಂದು ಅನೇಕ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ.

1990ರ ದಶಕದಲ್ಲಿ ಮಂಗಳ ಗ್ರಹದ ಅನ್ವೇಷಣೆಗೆ ಸಂಬಂಧಿಸಿದಂತೆ ಅಮೆರಿಕ ದೇಶಕ್ಕೆ



ಮಂಗಳನನ್ನು ಸುತ್ತುತ್ತಿರುವ ಭಾರತದ 'ಮಾಮ್' ನೌಕೆ (ಚಿತ್ರಕೃಪೆ: ಇಸ್ರೋ)